**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>**

**ಸಿ ಸಿ ಸಂಃ 3860/2022**

| | | |
|---|---|---|
| ಸಾಕ್ಷಿಯ ಹೆಸರುಃ | ಸಣ್ಣತಿಮ್ಮಯ್ಯ | ಪ್ರಾಸಾಃಃ 1 |
| ತಂದೆ ಹೆಸರುಃ | ರಾಮಯ್ಯ | ಚಾಸಾಃಃ 2 |
| ವಯಸ್ಸುಃ | 30 ವರ್ಷ | ಪ್ರಮಾಣೀಕರಿಸಿದ<br>ದಿಃ 01/07/2024 |
| ಉದ್ಯೋಗಃ | ವ್ಯಾಪಾರ | |
| ವಾಸ ಸ್ಥಳಃ | ಬೆಟ್ಟದಪುರ ಗ್ರಾಮ,<br>ಪಿರಿಯಾಪಟ್ಟಣ ತಾಲ್ಲೂಕು. | |

<u>**ಮುಖ್ಯ ವಿಚಾರಣೆಃ** ಮಾನ್ಯ **ಸಸಅ ರಿಂದಃ**</u>

ನನಗೆ ಆರೋಪಿತ ಪರಿಚಯ ಇದ್ದಾರೆ. ಚಾಸಾ-1, 3 ರಿಂದ 9 ರವರ ಪಚರಿಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಮೃತ ನನ್ನ ಅಣ್ಣನ ಬ್ಯಾರೇನ್ ನಲ್ಲಿ ಕೆಲಸ ಮಾಡುತ್ತಿದ್ದುದ್ದು ನನಗೆ ಗೊತ್ತಿಲ್ಲ. ಅವರು ಆ ಸಮಯದಲ್ಲಿ ಮೇಲಿನಿಂದ ಬಿದ್ದು ಗಾಯಪಡಿಸಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಚಾರ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ, ಯಾವುದೇ ವಾಹನವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರ್ ನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ನಾನು ನನ್ನ ಮುಂದುವರೆದ ಹೇಳಿಕೆ ನೀಡಿರುವುದಿಲ್ಲ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಸಅ ರವರಿಂದಃ**

ಈಗ ನನಗೆ ಓದಿ ಹೇಳಿದಂತೆ '' ದಿನಾಂಕಃ08/07/2022 ರಂದು ............................ ಈ ಮಹಜರ್ ನ್ನು ಬೆಳಿಗ್ಗೆ 11.00 ಗಂಟೆಯಿಂದ 11.45 ಗಂಟೆಯವರೆಗೆ ಸ್ಥಳದಲ್ಲೇ ಬರೆಯಲಾಯ್ತು '' ಎಂದು ನಿಪಿ.1 ರಂತೆ ಮಹಜರ್ ಕ್ರಮ ಜರುಗಿಸಲಾಯಿತು ಮತ್ತು ಸದರಿ ಮಹಜರ್ ಗೆ ನಾನು ಸ್ಥಳದಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈಗ ನನಗೆ ಓದಿ ಹೇಳಿದಂತೆ ''ನಾನು ಮೇಲ್ಕಂಡ ವಿಳಾಸದಲ್ಲಿ ............ ಸಹಿ ಮಾಡಿರುತ್ತೇನೆ.'' ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ.2** ಎಂದು ಗುರುತಿಸಲಾಯಿತು.

ಈಗ ನನಗೆ ಓದಿ ಹೇಳಿದಂತೆ ''ನಾನು ಮೇಲ್ಕಂಡ ವಿಳಾಸದಲ್ಲಿ ............ ನೀಡಿರುತ್ತೇನೆ.'' ಎಂದು ಪೊಲೀಸರ ಮುಂದೆ ಮುಂದುವರೆದ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಮುಂದುವರೆದ ಹೇಳಿಕೆಯನ್ನು **ನಿಪಿ.3** ಎಂದು ಗುರುತಿಸಲಾಯಿತು.ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ** ಇಲ್ಲ.

**ಮರು ವಿಚಾರಣೆಃ** ಇಲ್ಲ.

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**